## ಉದ್ಯಾನ ಇಲಾಖೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

### ಸುತ್ತೋಲೆ

ದಿನಾಂಕ: 1-8-24

ನಂ.KU/Hort./Sale/24-25/75

ಕ.ವಿ.ವಿ ಆವರಣದಲ್ಲಿ ನರ್ಸರಿಯಲ್ಲಿ ಕೂಡಿ ಹಾಕಿದ ಒಣ ಕಟ್ಟಿಗೆ ಲಾಟಗಳನ್ನು(ಗುಂಪುಗಳನ್ನು) ಟೆಂಡರ/ಬಹಿರಂಗ ಹರಾಜನ್ನು ಉದ್ಯಾನ ಇಲಾಖೆಯಲ್ಲಿ ಏರ್ಪಡಿಸಲಾಗಿದೆ. ವಿವರಣೆ ಈ ಕೆಳಗಿನಂತಿದೆ.

| ಲಾಟ ಸಂಖ್ಯೆ | ಕಟ್ಟಿಗೆ ಜಾತಿ ಮತ್ತು ಲಾಟಗಳ ವಿವರಣೆ | ಹರಾಜಿನಲ್ಲಿ ಭಾಗವಹಿಸಲು ಕಟ್ಟಬೇಕಾದ ಠೇವಣಿ | ಸುರಕ್ಷಾ ಠೇವಣಿ |
|---|---|---|---|
| 1 | ಅಕೇಶಿಯಾ ಗುಂಪು. ನಂ 1 ಮತ್ತು 2 | 30,000=00 | 1000=00 |
| 2 | ಜಂಗ್ಲಿ ಗುಂಪು ನಂ 3, 4, 5, 6,7, 8, 9, ಮತ್ತು 10 | 15,000=00 | 1000=00 |
| 3 | ಪೇರಲ ಗುಂಪು ನಂ.11 ಮತ್ತು 12 | 5000=00 | 1000=00 |

**ಟೆಂಡರ ಕರಾರುಗಳು :**

1. ಮೇಲೆ ತಿಳಿಸಿದ ಆವರಣದ ನರ್ಸರಿಯಲ್ಲಿ ಕೂಡಿ ಹಾಕಿದ ಕಟ್ಟಿಗೆ ಲಾಟಗಳ (ಗುಂಪುಗಳ)ನ್ನು ಚನ್ನಾಗಿ ಗುರುತಿಸಿಕೊಂಡು **Finance Officer, Karnatak University, Dharwad** ಇವರ ಹೆಸರಿನಲ್ಲಿ ಮೇಲೆ ತಿಳಿಸಿದ ಲಾಟಗಳನ್ನು ಕೊಳ್ಳುವದಕ್ಕೆ ಭಾಗವಹಿಸಲು ಕಟ್ಟ ಬೇಕಾದ ಠೇವಣಿ ಹಣದ ಡಿ.ಡಿ. ಯೊಂದಿಗೆ ತಮ್ಮ ಟೆಂಡರ ದರವನ್ನು **ನಿಗದಿತ ಫಾರ್ಮ** ನಲ್ಲಿ ಬರೆದು ಹಾಕಬೇಕು. ಫಾರ್ಮಗಳನ್ನು ರೂ. **4000=00** + CGST and SGST **720=00 (18 %)** = ಒಟ್ಟು ರೂ. **4720=00**. ರೂ. **4000=00** ಗಳನ್ನು ಚಲನ ಮೂಲಕ ಬ್ಯಾಂಕಿಗೆ ತುಂಬಿ ಉದ್ಯಾನ ವಿಭಾಗದಲ್ಲಿ ತೋರಿಸಿದಾಗ ಟೆಂಡರ ಫಾರ್ಮ ಕೊಡಲಾಗುವದು. CGST and SGST **(720=00)** ಹಣವನ್ನು ನಗದು ರೂಪದಲ್ಲಿ ನೀಡಬೇಕು. ಸದರ ಪ್ರಕ್ರಿಯಯಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಟೆಂಡರ ಫಾರ್ಮ ಪಡೆಯಲೇ ಬೇಕು ಮತ್ತು ಟೆಂಡರ ಬಾಕ್ಸನಲ್ಲಿ ಹಾಕಬೇಕು. ಟೆಂಡರ ಫಾರ್ಮ ತುಂಬಿ ಟೆಂಡರ ಡಬ್ಬದಲ್ಲಿ ಹಾಕದೇ ನೇರವಾಗಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಫಾರ್ಮಿಗೆ ಸಂಬಂಧಿಸಿದಂತೆ ತುಂಬಿದ ಹಣವನ್ನು ಯಾವುದೇ ಕಾರಣಕ್ಕಾಗಿ ಮರುಳಿಸಲಾಗುವದಿಲ್ಲಾ. **ಟೆಂಡರದಾರರು ಕಡ್ಡಾಯವಾಗಿ ಅಧಿಕೃತ ವಿಳಾಸದ ಪುರಾವೆ ಒದಗಿಸಬೇಕು(ಆದಾರ ಕಾರ್ಡ/ವೋಟರ ಕಾರ್ಡ) ಮತ್ತು ಪ್ಯಾನ ಕಾರ್ಡ ಲಗತ್ತಿಸಬೇಕು.**

2. ದಿನಾಂಕ **13-8-2024** ರಂದು ಮದ್ಯಾನ **3.00** ಗಂಟೆ ಒಳಗಾಗಿ ಉದ್ಯಾನ ಇಲಾಖೆಯಲ್ಲಿರುವ ಸೀಲು ಮಾಡಿದ ಟೆಂಡರ ಪೆಟ್ಟಿಗೆಯಲ್ಲಿ ಹಾಕಬೇಕು ತದನಂತರ ಬಂದವರನ್ನು ಪರಿಗಣಿಸಲಾಗುವದಿಲ್ಲಾ. ಮತ್ತು ಅದೇ ದಿವಸ ಮದ್ಯಾಹ್ನ **3.30** ಗಂಟೆಗೆ ಬಹಿರಂಗು ಹರಾಜು ಏರ್ಪಡಿಸಲಾಗುವದು. ಮೋಹರಾದ ಟೆಂಡರಗಳನ್ನು ಬಹಿರಂಗ ಹರಾಜಿನ ನಂತರ ತೆರೆದು ಹೆಚ್ಚಿನ ಬೇಡಿಕೆದಾರರಿಗೆ, ಪಸಲು ಹರಾಜು ಸಮೀತಿ ಸದಸ್ಯರಿಗೆ ಹಾಗೂ ಮೇಲಾಧಿಕಾರಿಗಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಗಿಡಗಳನ್ನು ನೀಡಲಾಗುವದು.

3. ಟೆಂಡರ: ಬಹಿರಂಗ ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಪಸಲು ಪಡೆದವರು, ಪಸಲು ಹರಾಜು ಸಮಿತಿ ಸದಸ್ಯರು ಒಪ್ಪಿಗೆ ನೀಡಿದಲ್ಲಿ ಪಸಲು ಮೊತ್ತದಲ್ಲಿ ಠೇವಣಿ ಹಣ ವಜಾಗೊಳಿಸಿ ಉಳಿದ ಹಣದ **75% ಹಣವನ್ನು** ಮರು ದಿನ ಬ್ಯಾಂಕಿನ ಅವದಿಪೊಳಗೆ ತುಂಬಬೇಕು. ಒಂದು ವೇಳೆ ತಾವು ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಂಡು, ಅದೇ ವೇಳಗೆ ತಾವು ಕೊಂಡ ಪಸಲುಗಳನ್ನು ಎರಡನೇಯ ಬೇಡಿಕೆದಾರರಿಗೆ ನೀಡಬಹುದಾಗಿದೆ. ಅದಕ್ಕೆ ತಮ್ಮ ಯಾವುದೇ ತಂಟೆ ತಕರಾರುಗಳನ್ನು ಪರಿಗಣಿಸುವದಿಲ್ಲಾ.

4. ಟೆಂಡರ:ಬಹಿರಂಗ ಹರಾಜು ದರಗಳು ಮೇಲಾಧಿಕಾರಿಗಳಿಂದ ಅಂಗಿಕೃತವಾಗಿ ಬಂದ ನಂತರ ಇನ್ನೂಳಿದ ಹಣವನ್ನು ತುಂಬಲು ಸೂಚಿಸಿದಾಗ ನಿಗದಿತ ಸಮಯದಲ್ಲಿ ಹಣವನ್ನು ತುಂಬದಿದ್ದಲ್ಲಿ ತಾವು ತುಂಬಿದ ಠೇವಣಿ ಹಣ ಹಾಗು ಶೇಖಡಾ **75%** ರಷ್ಟು ತುಂಬಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವದು. ಮೇಲ್ಕಂಡ ಗಿಡಗಳಿಗೆ ಯೋಗ್ಯ ಧಾರಣಿಯು ಬಾರದಿದ್ದಲ್ಲಿ ಟೆಂಡರ: ಬಹಿರಂಗ ಹರಾಜು ದರ ಸ್ವಿಕರಿಸುವ ಅಥವಾ ನೀರಾಕರಿಸುವ ಹಕ್ಕನ್ನು ಮೇಲಾಧಿಕಾರಿಗಳಿಗೆ ಕಾಯ್ದಿರಿಸಿದೆ.

5. ತಾವು ಸಂದಾಯ ಮಾಡಿದ ಸುರಕ್ಷಾ ಠೇವಣಿ ಹಣವನ್ನು ಕಟ್ಟಿಗೆ ತೆಗೆದುಕೊಂಡು ಹೋದನಂತರ ತಮಗೆ ಹಿಂತಿರುಗಿಸಲಾಗುವದು. ಟೆಂಡರನಲ್ಲಿ ಭಾಗವಹಿಸಿ ಟೆಂಡರನಲ್ಲಿ ಹೆಚ್ಚಿಗೆ ಬೇಡಿಕೆ ಸಲ್ಲಿಸಿ, ಪಸಲಿನ ಹಣವನ್ನು ಸಂಪೂರ್ಣವಾಗಿ ವಿಶ್ವವಿದ್ಯಾಲಯಕ್ಕೆ ತುಂಬಿ ಪಸಲು ತೆಗೆದುಕೊಂಡು ಹೋಗುವ ಅನುಮತಿ ಪಡೆದ ನಂತರವು ಕಟ್ಟಿಗೆ ವಿಲೇವಾರಿಗೆ ಏನಾದರು ತೊಂದರೆಗಳು ಬಂದಲ್ಲಿ ಮೇಲಾಧಿಕಾರಿಗಳು ಸದರ ವಿಷಯಕ್ಕೆ ಸಂಬಂದಿಸಿದಂತೆ ತೆಗೆದುಕೊಳ್ಳುವ ನಿರ್ಣಯವೇ ಅಂತಿಮ. ಅದಕ್ಕೆ ತಂಟೆ ತಕರಾರುಗಳನ್ನು ಪರಿಗಣಿಸಲಾಗುವದಿಲ್ಲಾ.

6. ನಿಯಮಾನುಸಾರ ಸರಕಾರಕ್ಕೆ ತುಂಬಬೇಕಾದ (Income tax, CGST and SGST) ಮತ್ತು ಅರಣ್ಯ ಇಲಾಖೆಗೆ ತುಂಬ ಬೇಕಾದ ಎಫ್.ಡಿ.ಟಿ ಹಣದ ಡಿಡಿ ಯನ್ನು ನಿಗದಿತ ತಿಳಿಸಿದ ಸಮಯದೊಳಗೆ ತುಂಬಬೇಕು ಮತ್ತು ರಶೀದಿಗಳನ್ನು ಉದ್ಯಾನ ವಿಭಾಗಕ್ಕೆ ಸಲ್ಲಿಸಬೇಕು, ನಂತರ ಕಟ್ಟಿಗೆ ಗುಂಪುಗಳನ್ನು ತೆಗೆದುಕೊಂಡು ಹೋಗುವದಕ್ಕೆ ಆದೇಶ ನೀಡಲಾಗುವದು. ಮತ್ತು ಮಾಲನ್ನು ಸಾಗಿಸುವಾಗ ಅರಣ್ಯ ಇಲಾಖೆಯ ನಿಯಮದಂತೆ ಕ್ರಮ ವಹಿಸಿ ಪಾಸ ಪಡೆದು ಜರಾಕ್ಸ ಪ್ರತಿಗಳನ್ನು ಉದ್ಯಾನ ಇಲಾಖೆಗೆ ಸಲ್ಲಿಸಿ ಕಟ್ಟಿಗೆ ತೆಗೆದುಕೊಂಡು ಹೋಗಬೇಕು.

7. ಕಟ್ಟಿಗೆಗಳನ್ನು ತೆಗೆದುಕೊಂಡು ಹೋಗುವಾಗ ಏನಾದರು ಅನಾಹುತ ಸಂಭವಿಸಿದಲ್ಲಿ ಕ.ವಿ.ವಿ. ಜವಾಬ್ದಾರವಲ್ಲಾ. ಏನಾದರು ವಿಶ್ವವಿದ್ಯಾಲಯಕ್ಕೆ ಹಾನಿಯಾದಲ್ಲಿ ತಾವೇ ತುಂಬಿ ಕೊಡಬೇಕು, ಕಟ್ಟಿಗೆ ತೆಗೆದುಕೊಂಡವರು ತಾವೇ ಕಾಯಬೇಕು, ಟೆಂಡರ ಪ್ರಕ್ರಿಯಲ್ಲಿ ಶಾಂತತೆ ಕಾಪಾಡದಿದ್ದರೆ ಮತ್ತು ಏನಾದರ ತೊಂದರೆಯಾದಲ್ಲಿ ಟೆಂಡರನ್ನು ರದ್ದುಗೊಳಿಸಲಾಗುವದು ಇದಕ್ಕೆ ತಮ್ಮ ತಕಾರರಗಳನ್ನು ಪರಿಗಣಿಸಲಾಗುದಿಲ್ಲಾ.

ಹೆಚ್ಚಿನ ಮಾಹಿತಿಗಾಗಿ ಉದ್ಯಾನ ಇಲಾಖೆಯಲ್ಲಿ ಕಚೇರಿ ವೇಳೆಯಲ್ಲಿ ವಿಚಾರಿಸಬಹುದು. ಫೂ. ನಂ. 0836-2215245

A Channappa

ಕುಲಸಚಿವರು

Scanned with OKEN Scanner